# ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ ಮೈನಪ್ರಾ/ಆಆಸಶಾ/2017–18 06.01.2018

## ಪತ್ರಿಕಾ ಪ್ರಕಟಣೆ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಆರ್.ಟಿ.ನಗರ ನಿವೇಶನ ಹಂಚಿಕೆ ಪ್ರಕಟಣೆ :ಮೈನಪ್ರಾ/ಲಲಿತಾದ್ರಿನಗರ (ಉತ್ತರ) ಪ್ರಕಟಣೆ ಸಂಖ್ಯೆ–1/2017–18, ದಿನಾಂಕ 26.07.2017 ರೀತ್ಯಾ ಹೊರಡಿಸಿದ್ದ ಪ್ರಕಟಣೆಗೆ ಅನುಗುಣವಾಗಿ ಲಲಿತಾದ್ರಿನಗರ (ಉತ್ತರ) ಬಡಾವಣೆಯ ನಿವೇಶನಗಳ ಫಲಾನುಭವಿಗಳ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ದಿನಾಂಕ 06.01.2018ರಂದು ಪ್ರಕಟಿಸಲಾಗಿದೆ. ಇದನ್ನು ಪ್ರಾಧಿಕಾರದ ವೆಬ್‌ಸೈಟ್ (www.mudamysore.gov.in) ಮತ್ತು ಪ್ರಾಧಿಕಾರದ ಪ್ರಕಟಣಾ ಫಲಕದಲ್ಲಿಯೂ ಸಹ ಪ್ರಕಟಿಸಲಾಗಿದೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮಗಳು, ಪ್ರಯತ್ನಗಳ ಜೇಷ್ಠತೆ ಹಾಗೂ ವಸತಿ/ನಿವೇಶನ ರಹಿತರನ್ನು ಪರಿಗಣಿಸಿ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಿ, ಅರ್ಜಿದಾರರ ಹೆಸರು, ಜನ್ಮ ದಿನಾಂಕ, ವಿಳಾಸ, ಅರ್ಜಿ ಸಂಖ್ಯೆ ಮತ್ತು ಪ್ರಯತ್ನಗಳ ಸಂಖ್ಯೆಯೊಂದಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಪ್ರಯತ್ನಗಳ ಜೇಷ್ಠತೆ, ಜನ್ಮ ದಿನಾಂಕ, ಪ್ರವರ್ಗ ಮತ್ತು ಮೀಸಲಾತಿ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಪ್ರಕಟಣಾ ದಿನಾಂಕದಿಂದ 20.01.2018ರೊಳಗೆ **ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸ್ಪಂದನಾ ಶಾಖೆಯಲ್ಲಿ** ಬೆಳಗ್ಗೆ 11.00 ರಿಂದ 2.00 ಗಂಟೆವರೆಗೆ ಅಗತ್ಯ ದಾಖಲಾತಿಗಳೊಂದಿಗೆ ಲಿಖಿತವಾಗಿ ಹಾಗೂ ಖುದ್ದು ಹಾಜರಾಗಿ ಸಲ್ಲಿಸಲು ತಿಳಿಸಿದೆ.

ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯಲ್ಲಿರುವ ಅರ್ಜಿದಾರರು, ಅರ್ಜಿಯೊಂದಿಗೆ ಸಲ್ಲಿಸಿರುವ ದಾಖಲೆಗಳು ಮತ್ತು ಅಫಿಡವಿಟ್‌ಗಳಲ್ಲಿನ ಮಾಹಿತಿಗಳು ಸುಳ್ಳು ಎಂದು ಕಂಡುಬಂದಲ್ಲಿ ನಿವೇಶನ ಹಂಚಿಕೆ ಸಮಿತಿಯ ನಿರ್ಣಯಗಳಂತೆ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯಿಂದ ಕೈಬಿಡಲಾಗುವುದು ಹಾಗೂ ಅಂತಹವರ ವಿರುದ್ಧ ಕಾನೂನು ರೀತ್ಯಾ ಕ್ರಮವಹಿಸಲಾಗುವುದು.

06/01/18

(ಪಿ.ಎಸ್.ಕಾಂತರಾಜ್)
ಆಯುಕ್ತರು
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಮೈಸೂರು